## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಡಾ. ಬಿ.ಆರ್.ಅಂಬೇಡ್ಕರ್ ರೈತ ಸೇವಾ ಅಗ್ರಿಕಲ್ಚರಲ್ ಡೆವಲಪ್‌ಮೆಂಟ್ ಇಂಡಸ್ಟ್ರೀಸ್ ಅಸೋಸಿಯೇಷನ್ (ರಿ), ಮೈಸೂರು ಇವರಿಗೆ ಅನುಪಯುಕ್ತ ವಸ್ತುಗಳ ವಿಲೇವಾರಿ ಮಾಡುವ ಬಗ್ಗೆ – ಆದೇಶ.

**ಓದಲಾಗಿದೆ:-**

1. ಸರ್ಕಾರದ ಆದೇಶ ಸಂಖ್ಯೆ. ಸಿಆಸುಇ/137/ಶಿವಾನೀ/ 2010, ದಿನಾಂಕ. 29-11-2010.
2. ಡಾ. ಬಿ.ಆರ್.ಅಂಬೇಡ್ಕರ್ ರೈತ ಸೇವಾ ಅಗ್ರಿಕಲ್ಚರಲ್ ಡೆವಲಪ್‌ಮೆಂಟ್ ಇಂಡಸ್ಟ್ರೀಸ್ ಅಸೋಸಿಯೇಷನ್ (ರಿ), ಮೈಸೂರು ಇವರ ಪತ್ರ ದಿನಾಂಕ. 01-02-2012.
3. ಸಮಾಜ ಕಲ್ಯಾಣ ಇಲಾಖೆಯ ಆದೇಶ ಸಂಖ್ಯೆ. ಎಸ್‌ಡಬ್ಲ್ಯೂಡಿ 34 ಬಿಸಿಎ 2004, ದಿನಾಂಕ. 01-03-2005

*****

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ. 29-11-2010ರ ಆದೇಶದಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಸರ್ಕಾರದ ವಿಲೇವಾರಿಯಾಗದೇ ಉಳಿದಿರುವ ಅನುಪಯುಕ್ತ ಹಳೆಯ ವಾಹನಗಳು ಹಾಗೂ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಸಂಗ್ರಹವಾಗಿರುವ ಎಲ್ಲಾ ರೀತಿಯ ಕಚ್ಚಾ ವಸ್ತುಗಳು ಹಾಗೂ ಟೈರು, ಟ್ಯೂಬು, ವಾಹನಗಳ ಬಿಡಿ ಭಾಗಗಳು, ಬ್ಯಾಟರಿ, ಖಾಲಿ ಡ್ರಮ್, ಜಿ.ಐ. ಮತ್ತು ಸಿ.ಐ. ಪಂಪ್, ಹ್ಯಾಂಡ್ ಪಂಪ್ ವಸ್ತುಗಳು ಮತ್ತು ಪಂಪ್ಸ್, ಅನುಪಯುಕ್ತ ಮೋಟಾರುಗಳು, ಎಲ್ಲಾ ತರಹದ ಹಿತ್ತಾಳೆ, ತಾಮ್ರ, ಅಲ್ಯೂಮಿನಿಯಂ ಮಿಷಿನರಿಗಳು, ಸುಟ್ಟ ಎಣ್ಣೆ ಮತ್ತು ಇನ್ನಿತರೆ ವಸ್ತುಗಳನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಇಲಾಖಾ ಮುಖ್ಯಸ್ಥರುಗಳು ನಿಗದಿಪಡಿಸಿದ ಬೆಲೆಗಿಂತ ಶೇಕಡಾ 10ರಷ್ಟು ಹೆಚ್ಚಿನ ಬೆಲೆಗೆ ಮೆ: ಭಾರತ್ ವ್ಯವಸಾಯೋತ್ಪನ್ನ ಮತ್ತು ಸಹಕಾರ ಸಂಘ, ಬೆಂಗಳೂರು ಇವರಿಗೆ ವಿಲೇವಾರಿ ಮಾಡಲು ಆದೇಶಿಸಿರುತ್ತದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ. 01-02-2012ರ ಮನವಿಯಲ್ಲಿ, ಡಾ. ಬಿ.ಆರ್.ಅಂಬೇಡ್ಕರ್ ರೈತ ಸೇವಾ ಅಗ್ರಿಕಲ್ಚರಲ್ ಡೆವಲಪ್‌ಮೆಂಟ್ ಇಂಡಸ್ಟ್ರೀಸ್ ಅಸೋಸಿಯೇಷನ್ (ರಿ), ಮೈಸೂರು ಇವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧೀನದಲ್ಲಿ ಬರುವ ಕ್ಷೇತ್ರ ಇಲಾಖೆಗಳಲ್ಲಿ ವಿಲೇವಾರಿಯಾಗದೆ ಉಳಿದಿರುವ ಹಳೆಯ ಅನುಪಯುಕ್ತ ಎಲ್ಲಾ ತರಹದ ವಾಹನಗಳು, ಯಂತ್ರೋಪಕರಣಗಳನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನಿಗಧಿಪಡಿಸುವ ದರಕ್ಕಿಂತ ಶೇಕಡಾ 15 ರಿಂದ 25ರಷ್ಟು ಹೆಚ್ಚಿನ ಬೆಲೆಗೆ ಮತ್ತು ಟಿ ಅಂಡ್ ಪಿ ಸಾಮಾಗ್ರಿಗಳನ್ನು ಪ್ರತಿ ಕೆ.ಜಿ.ಗೆ ರೂ. 13/- ರಂತೆ ಕೊಂಡುಕೊಳ್ಳಲು ಬದ್ಧರಾಗಿರುವುದಾಗಿ ತಿಳಿಸುತ್ತಾ, ಸದರಿ ಸಂಸ್ಥೆಗೆ ವಿಲೇವಾರಿ ಮಾಡಲು ಆದೇಶ ನೀಡಬೇಕೆಂದು ಕೋರಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ದಿನಾಂಕ. 01-03-2005ರ ಆದೇಶದಲ್ಲಿ ಸಮಾಜ ಕಲ್ಯಾಣ ಇಲಾಖೆಯು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಇತರೆ ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರಿಗೆ ಶೇಕಡಾ 50ರಷ್ಟು ಆದ್ಯತೆ ನೀಡಬೇಕೆಂದು ಆದೇಶಿಸಿರುತ್ತದೆ.

----2

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಡಾ. ಬಿ.ಆರ್.ಅಂಬೇಡ್ಕರ್ ರೈತ ಸೇವಾ ಅಗ್ರಿಕಲ್ಚರಲ್ ಡೆವಲಪ್‌ಮೆಂಟ್ ಇಂಡಸ್ಟ್ರೀಸ್ ಅಸೋಸಿಯೇಷನ್ (ರಿ), ಮೈಸೂರು ಈ ಸಂಸ್ಥೆಯು ಪರಿಶಿಷ್ಟಜಾತಿ ಆಡಳಿತ ಮಂಡಳಿಯನ್ನು ಹೊಂದಿರುವುದರಿಂದ ದಿನಾಂಕ. 1-3-2005ರ ಸಮಾಜ ಕಲ್ಯಾಣ ಇಲಾಖೆಯ ಆದೇಶದನ್ವಯ ಸದರಿ ಸಂಸ್ಥೆಗೆ ದಕ್ಷಿಣ ಕರ್ನಾಟಕದ ಬೆಂಗಳೂರು ಮತ್ತು ಮೈಸೂರು ಕಂದಾಯ ವಿಭಾಗಗಳ ವ್ಯಾಪ್ತಿಯಲ್ಲಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧೀನದಲ್ಲಿ ಬರುವ ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ / ಉಪ ವಿಭಾಗ, ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನಾ ವಿಭಾಗ / ಉಪ ವಿಭಾಗ ಮತ್ತಿತರ ಕಚೇರಿಗಳಲ್ಲಿ ಸಂಗ್ರಹವಾಗಿರುವ ಎಲ್ಲಾ ರೀತಿಯ ಅನುಪಯುಕ್ತ ವಸ್ತುಗಳು, ಹಳೆಯ ವಸ್ತುಗಳು ಮತ್ತು ಮೋಟಾರು ವಾಹನಗಳು ಹಾಗೂ ಜನರೇಟರ್‌ಗಳನ್ನು ಶೇಕಡಾ 13 ರಿಂದ ಶೇಕಡಾ 25 ರವರೆಗೆ ವಿಲೇವಾರಿ ಮಾಡಲು ಉದ್ದೇಶಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ. ಗ್ರಾಅಪ 79 ಜಿಪಅ 2012, ಬೆಂಗಳೂರು, ದಿನಾಂಕ.21-04-2012**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಡಾ: ಬಿ.ಆರ್.ಅಂಬೇಡ್ಕರ್ ರೈತ ಸೇವಾ ಅಗ್ರಿಕಲ್ಚರಲ್ ಡೆವಲಪ್‌ಮೆಂಟ್ ಇಂಡಸ್ಟ್ರೀಸ್ ಅಸೋಸಿಯೇಷನ್ (ರಿ), ಮೈಸೂರಿನ ಶ್ರೀ [illegible] ಇವರು ಸಿ.ಎಸ್.ಟಿ. / ಟಿನ್ ನಂಬರ್‌ಗಳನ್ನು ಹೊಂದಿದ ಸಂಸ್ಥೆಯಾಗಿದ್ದು, ಶ್ರೀಯುತರು ಗ್ರಾಮೀಣಾಭಿವೃದ್ಧಿ ಇಲಾಖೆಯ ಎಲ್ಲಾ ಕಚೇರಿಗಳಲ್ಲಿ ಅಂದರೆ ದಕ್ಷಿಣ ಕರ್ನಾಟಕದ ಎರಡು ವಿಭಾಗಗಳಲ್ಲಿ ಕೋರಿಕೊಂಡಿರುವ ದಿನಾಂಕ. 1-2-2012ರ ಮನವಿಯ ದರ ಶೇಕಡಾ 13 ರಿಂದ ಶೇಕಡಾ 25 ಹೆಚ್ಚಿನ ಬೆಲೆಗೆ ಡಾ: ಬಿ.ಆರ್.ಅಂಬೇಡ್ಕರ್ ರೈತ ಸೇವಾ ಅಗ್ರಿಕಲ್ಚರಲ್ ಡೆವಲಪ್‌ಮೆಂಟ್ ಇಂಡಸ್ಟ್ರೀಸ್ ಅಸೋಸಿಯೇಷನ್ (ರಿ), ಮೈಸೂರು ಇವರಿಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ವಿಲೇವಾರಿ ಮಾಡುವಂತೆ ನಿರ್ದೇಶಿಸಿ ಆದೇಶಿಸಲಾಗಿದೆ:-

(i) *ಇಲಾಖೆಯ ಮುಖ್ಯಸ್ಥರು ಹಾಗೂ ಅಧಿಕಾರಿಗಳು ಅಂದಾಜು ಮಾಡಿ ನಿಗಧಿಪಡಿಸಿದ ದರ ಅಥವಾ ಹಿಂದೆ ಬಹಿರಂಗ ಹರಾಜಿನಲ್ಲಿ ನಿಗದಿಪಡಿಸಿದ ದರಕ್ಕಿಂತ ಶೇಕಡಾ 13 ರಿಂದ 25ರಷ್ಟು ಹೆಚ್ಚಿನ ದರದಲ್ಲಿ ಸದರಿ ಸಂಘಕ್ಕೆ ವಿಲೇವಾರಿ ಮಾಡತಕ್ಕದ್ದು.*

(ii) *ಮೊದಲ ಸಾರಿ 2 ವರ್ಷದವರೆಗೆ ಈ ಸಂಘಕ್ಕೆ ಕೊಟ್ಟ ಮೇಲೆ ಇದರ ಮುಂದಿನ ವಿಲೇವಾರಿಯನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಿ ಟೆಂಡರ್ ಕರೆದು ಒಂದು ವರ್ಷ ಬಿಡ್ ಮುಖಾಂತರವೇ ಮಾಡತಕ್ಕದ್ದು. ಪುನ: ಎರಡು ವರ್ಷ ಸಂಘಕ್ಕೆ ನಂತರ ಒಂದು ವರ್ಷ ಬಿಡ್ ಮುಖಾಂತರವೇ ಮುಂದುವರೆಯುವುದು.*

(iii) *ಸದರಿ ಸಂಘವು ಈ ತರಹ ವಸ್ತುಗಳನ್ನು ಕೊಂಡ ಮೇಲೆ ಅದನ್ನು ಸದರಿ ಸಂಘದ ಸದಸ್ಯರುಗಳಿಂದ ಕಚ್ಚಾಮಾಲಾಗಿ ವಿಲೇವಾರಿ ಮಾಡತಕ್ಕದ್ದು.*

(iv) *ಸಹಕಾರ ಸಂಘಗಳಿಲ್ಲದ ಸಂದರ್ಭದಲ್ಲಿ, ಜಿಲ್ಲಾ ಮಟ್ಟದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಟೆಂಡರ್ / ಇ.ಓ.ಐ.* **(Expression of Interest)** *ಮೂಲಕ ವಿಲೇವಾರಿ ಮಾಡತಕ್ಕದ್ದು.*

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

21/4/2012
(ಎನ್.ವೈ.ಸಾಗರ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು (ಲೆಕ್ಕ ಪತ್ರ 1 & 2) / (ಆಡಿಟ್)

-----3

2. ಜಿಲ್ಲಾಧಿಕಾರಿಗಳು, ಬೆಂಗಳೂರು ಮತ್ತು ಮೈಸೂರು.
3. ನಿರ್ದೇಶಕರು, ಕರ್ನಾಟಕ ಗ್ರಾಮೀಣ ನೀರು ಸರಬರಾಜು & ನೈರ್ಮಲ್ಯ ಸಂಸ್ಥೆ, ಕಾವೇರಿ ಭವನ, ಬೆಂಗಳೂರು.
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ರಿಸಾಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು,
5. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕೆ.ಆರ್.ಆರ್.ಡಿ.ಎ., ರಾಜಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ / ಬೆಂಗಳೂರು ನಗರ/ ಮೈಸೂರು.
7. ಅಧೀಕ್ಷಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ ಬೆಂಗಳೂರು / ಮೈಸೂರು.
8. ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ / ಬೆಂಗಳೂರು ಗ್ರಾಮಾಂತರ / ಮೈಸೂರು
9. ಕಾರ್ಯಪಾಲಕ ಇಂಜಿನಿಯರ್, ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನಾ ವಿಭಾಗ, ಬೆಂಗಳೂರು ನಗರ / ಬೆಂಗಳೂರು ಗ್ರಾಮಾಂತರ / ಮೈಸೂರು.
10. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಬೆಂಗಳೂರು ಉತ್ತರ / ಬೆಂಗಳೂರು ದಕ್ಷಿಣ / ಬೆಂಗಳೂರು ಪೂರ್ವ, ಕೃಷ್ಣರಾಜಪುರಂ / ಆನೇಕಲ್ / ಹೊಸಕೋಟೆ / ದೊಡ್ಡಬಳ್ಳಾಪುರ / ದೇವನಹಳ್ಳಿ / ನೆಲಮಂಗಲ / ಮೈಸೂರು.
11. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನಾ ಉಪ ವಿಭಾಗ, ಬೆಂಗಳೂರು ನಗರ / ಬೆಂಗಳೂರು ಗ್ರಾಮಾಂತರ / ಮೈಸೂರು.
12. ಡಾ. ಬಿ.ಆರ್.ಅಂಬೇಡ್ಕರ್ ರೈತ ಸೇವಾ ಅಗ್ರಿಕಲ್ಚರಲ್ ಡೆವಲಪ್‌ಮೆಂಟ್ ಇಂಡಸ್ಟ್ರೀಸ್ ಅಸೋಸಿಯೇಷನ್ (ರಿ), ಮೈಸೂರು.
13. ಗ್ರಾ.ಅ.ಪಂ.ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್)/ ಉಪ ಕಾರ್ಯದರ್ಶಿ ಇವರುಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ.
14. ರಕ್ಷಾ ಕಡತ / ಕಂಪ್ಯೂಟರ್ ಸೆಲ್ / ಹೆಚ್ಚುವರಿ ಪ್ರತಿಗಳು.